ಫ್ಯಾಕ್ಸ್ / Fax : 080-25586321
ಈಮೇಲ್ / E-mail : ho@kspcb.gov.in
ವೆಬ್‌ಸೈಟ್ / Website : http://kspcb.gov.in

25581383, 25589112
25588151, 25588270
25588142, 25586520

# ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ
# Karnataka State Pollution Control Board

"ಪರಿಸರಭವನ", 1 ರಿಂದ 5ನೇ ಮಹಡಿಗಳು, ನಂ.49, ಚರ್ಚ್‌ಸ್ಟ್ರೀಟ್, ಬೆಂಗಳೂರು - 560 001, ಕರ್ನಾಟಕ, ಭಾರತ
"Parisara Bhavana", 1st to 5th Floor, # 49, Church Street, Bengaluru - 560 001, Karnataka, INDIA

ಸಂಖ್ಯೆ: ಮಾನಿಮ 107 ಆಡಅ 2014/ 533 ದಿನಾಂಕ: 21 MAY 2015

**ಅಂತಿಮ ಅಧಿಸೂಚನೆ**

ವಿಷಯ:ಕರ್ನಾಟಕ ಸಾರ್ವಜನಿಕ ಉದ್ಯೋಗ (ಹೈದರಾಬಾದ್-ಕರ್ನಾಟಕ ಪ್ರದೇಶಕ್ಕೆ ನೇಮಕಾತಿಯಲ್ಲಿ ಮೀಸಲಾತಿ) (ಸ್ಥಳೀಯ ವೃಂದಗಳ ರಚನೆ, ಹಂಚಿಕೆ ಮತ್ತು ವ್ಯಕ್ತಿಗಳ ವರ್ಗಾವಣೆ) ಆದೇಶ 2013 ರಡಿಯಲ್ಲಿ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯಲ್ಲಿನ ವಿವಿಧ ವೃಂದಗಳಲ್ಲಿ ಹೈದರಾಬಾದ್-ಕರ್ನಾಟಕ ಪ್ರದೇಶದವರಿಗಾಗಿ ಶೇ. 8 ರಷ್ಟು ಹುದ್ದೆಗಳನ್ನು ಹಾಗೂ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ಹೈದರಾಬಾದ್-ಕರ್ನಾಟಕ ಪ್ರದೇಶದಲ್ಲಿ ಕಾರ್ಯನಿರ್ವಹಿಸುತ್ತಿರುವ ಪ್ರಾದೇಶಿಕ ಕಚೇರಿಗಳಿಗೆ ಸಂಬಂಧಿಸಿದಂತೆ ಶೇ. 75, 80 ಮತ್ತು 85 ರಷ್ಟು ಕ್ರಮವಾಗಿ ಗ್ರೂಪ್ ಎ-ಕಿರಿರಿಯ ಶ್ರೇಣಿ ಹಾಗೂ ಬಿ, ಸಿ ಮತ್ತು ಡಿ ಹುದ್ದೆಗಳನ್ನು ಗುರುತಿಸುವ ಕುರಿತು.

ಉಲ್ಲೇಖ:1. ಸರ್ಕಾರದ ಅಧಿಸೂಚನೆ ಸಂಖ್ಯೆ:ಡಿಪಿಎಆರ್ 06 ಪಿಎಲ್‌ಎಕ್ಸ್ 2012ರ ದಿನಾಂಕ: 06-11-2013
2. ಸರ್ಕಾರದ ಅಧಿಸೂಚನೆ ಸಂಖ್ಯೆ:ಡಿಪಿಎಆರ್ 06 ಹೆಚ್‌ಕೆಸಿ 2013 ರ ದಿನಾಂಕ: 29-01-2014
3. ಮಂಡಳಿಯ ಪತ್ರದ ಸಂಖ್ಯೆ: ಮಾನಿಮ 107 ಆಡಅ 2014/578 ರ ದಿನಾಂಕ: 01-12-2014
4. ಸರ್ಕಾರದ ಪತ್ರದ ಸಂಖ್ಯೆ:ಅಪಜೀ 131 ಇಪಿಸಿ 2013 ರ ದಿನಾಂಕ:07-03-2015
5. ಮಂಡಳಿಯ ಆದೇಶ ಸಂಖ್ಯೆ:ಕರಾಮಾನಿಮಂ/ಆಡಳಿತ/2006-07/312 ರ ದಿನಾಂಕ: 04-05-2006
6. ಮಂಡಳಿಯ ಜ್ಞಾಪನ ಪತ್ರದ ಸಂಖ್ಯೆ: ಮಾನಿಮ 05 ಆಡಅ 10/1305 ರ ದಿನಾಂಕ: 31-07-2010

>>><<<

ಭಾರತದ ಸಂವಿಧಾನದ ಅನುಚ್ಛೇದ 371 (ಜೆ) ಅನುಷ್ಠಾನಕ್ಕೆ ಸಂಬಂಧಿಸಿದಂತೆ ಹೊರಡಿಸಿರುವ ಕರ್ನಾಟಕ ಸಾರ್ವಜನಿಕ ಉದ್ಯೋಗ (ಹೈದರಾಬಾದ್-ಕರ್ನಾಟಕ ಪ್ರದೇಶದವರಿಗಾಗಿ) ನೇಮಕಾತಿಯಲ್ಲಿ ಮೀಸಲಾತಿ, (ಆದೇಶ 2013 ರ ಕಂಡಿಕೆ 13 ) ರಲ್ಲಿ ಆದೇಶಿಸಿರುವಂತೆ ಕರ್ನಾಟಕ ಸರ್ಕಾರದ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆಯ ವ್ಯಾಪ್ತಿಯಲ್ಲಿ ಇರುವ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ಪರಿಸರ ಮಾಲಿನ್ಯ ನಿಯಂತ್ರಣ ಕ್ಷೇತ್ರಕ್ಕೆ ಸಂಬಂಧಪಟ್ಟಂತೆ ರಾಜ್ಯ ಮಟ್ಟದಲ್ಲಿ ಸೇವೆ ಸಲ್ಲಿಸುತ್ತಿರುವುದರಿಂದ, ಈ ಸಂಸ್ಥೆಯನ್ನು ರಾಜ್ಯ ಮಟ್ಟದ ಸಂಸ್ಥೆಯೆಂದು ಸದರಿ ನಿಯಮಗಳಡಿ ಪರಿಗಣಿಸಿ ದಿನಾಂಕ:01-01-2013 ರವರೆಗೆ ಮತ್ತು ಆ ದಿನಾಂಕದಂದಿನ ವೃಂದಬಲ ಮತ್ತು ಸಂಸ್ಥೆಯ ವೃಂದ ಮತ್ತು ನೇಮಕಾತಿ ನಿಯಮಾವಳಿಗಳ ರೀತ್ಯಾ

.....2

ಹೈದರಾಬಾದ್-ಕರ್ನಾಟಕ ಪ್ರದೇಶದ ಸ್ಥಳೀಯ ವ್ಯಕ್ತಿಗಳಿಗೆ ಕ್ರಮವಾಗಿ ಕೇಂದ್ರ ಸ್ಥಾನ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಬೆಂಗಳೂರು ಇಲ್ಲಿ ಗ್ರೂಪ್ ಎ (ಕಿರಿಯ ಶ್ರೇಣಿ), ಬಿ, ಸಿ ಮತ್ತು ಡಿ ಹುದ್ದೆಗಳಿಗೆ ಶೇ.8 ರ ಮೀಸಲಾತಿ ಹುದ್ದೆಗಳನ್ನು ಹಾಗೂ (ಮಂಡಳಿಯ ಆದೇಶ ಸಂಖ್ಯೆ:ಕರಾಮಾನಿಮಂ/ಆಡಳಿತ/2006-07/312 ರ ದಿನಾಂಕ:04-05-2006 ರಂತೆ, ಜಲ (ಮಾಲಿನ್ಯ ನಿಯಂತ್ರಣ ಮತ್ತು ನಿವಾರಣ) ಕಾಯ್ದೆ 1974, ಜಲ (ಮಾಲಿನ್ಯ ನಿಯಂತ್ರಣ ಮತ್ತು ನಿವಾರಣ) ನಿಯಮ 1975, ಕರ್ನಾಟಕ ರಾಜ್ಯ ಜಲ (ಮಾಲಿನ್ಯ ನಿಯಂತ್ರಣ ಮತ್ತು ನಿವಾರಣ) ನಿಯಮ 1976 ಹಾಗೂ ಮಂಡಳಿಯ ವೃಂದ ಮತ್ತು ನೇಮಕಾತಿ ನಿಯಮಾವಳಿಗಳು 1992 ಮತ್ತು ಮಂಡಳಿ ಜ್ಞಾಪನ ಪತ್ರದ ಸಂಖ್ಯೆ:ಮಾನಿಮ 05 ಆಡಎ 10/1305 ರ ದಿನಾಂಕ:31-07-2010 ರಲ್ಲಿ ಪ್ರತಿ ಪ್ರಾದೇಶಿಕ ಕಚೇರಿಗಳ ಸಿಬ್ಬಂದಿ ರಚನೆ (Staff Strucrure) ಯಲ್ಲಿ ನಿಗದಿಪಡಿಸಿರುವಂತೆ) ಅನುಸೂಚಿ-1 ರಲ್ಲಿ ಗುರುತಿಸಲಾಗಿದೆ.

ಮುಂದುವರೆದಂತೆ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ಹೈದರಾಬಾದ್-ಕರ್ನಾಟಕ ಪ್ರದೇಶದಲ್ಲಿ ಕಾರ್ಯನಿರ್ವಹಿಸುತ್ತಿರುವ ಪ್ರಾದೇಶಿಕ ಕಚೇರಿಗಳಿಗೆ ಸಂಬಂಧಿಸಿದಂತೆ ಕರ್ನಾಟಕ ಸಾರ್ವಜನಿಕ ಉದ್ಯೋಗ (ಹೈದರಾಬಾದ್-ಕರ್ನಾಟಕ ಪ್ರದೇಶದವರಿಗಾಗಿ) ನೇಮಕಾತಿಯಲ್ಲಿ ಮೀಸಲಾತಿ ಆದೇಶ 2013 ರ (ಕಂಡಿಕೆ 13) ರಲ್ಲಿ ಆದೇಶಿಸಿರುವಂತೆ ಮಂಡಳಿಯ ಹೈದರಾಬಾದ್-ಕರ್ನಾಟಕ ಪ್ರದೇಶದಲ್ಲಿ ಕಾರ್ಯನಿರ್ವಹಿಸುತ್ತಿರುವ ಪ್ರಾದೇಶಿಕ ಕಚೇರಿಗಳನ್ನು ಸ್ಥಳೀಯ ಸಂಸ್ಥೆಗಳೆಂದು ಪರಿಗಣಿಸಿ ಗ್ರೂಪ್ ಎ (ಕಿರಿಯ ಶ್ರೇಣಿ) ಹಾಗೂ ಬಿ, ಸಿ ಮತ್ತು ಡಿ ಗಳಲ್ಲಿ ಕ್ರಮವಾಗಿ ಶೇ.75, 80 ಮತ್ತು 85 ರಷ್ಟು ಮೀಸಲಾತಿ ಹುದ್ದೆಗಳನ್ನು ಹಾಗೂ (ಮಂಡಳಿಯ ಆದೇಶ ಸಂಖ್ಯೆ: ಕರಾಮಾನಿಮಂ/ಆಡಳಿತ/2006-07/312 ರ ದಿನಾಂಕ:04-05-2006 ರಂತೆ, ಜಲ (ಮಾಲಿನ್ಯ ನಿಯಂತ್ರಣ ಮತ್ತು ನಿವಾರಣ) ಕಾಯ್ದೆ 1974, ಜಲ (ಮಾಲಿನ್ಯ ನಿಯಂತ್ರಣ ಮತ್ತು ನಿವಾರಣ) ನಿಯಮ 1975, ಕರ್ನಾಟಕ ರಾಜ್ಯ ಜಲ (ಮಾಲಿನ್ಯ ನಿಯಂತ್ರಣ ಮತ್ತು ನಿವಾರಣ) ನಿಯಮ 1976 ಹಾಗೂ ಮಂಡಳಿಯ ವೃಂದ ಮತ್ತು ನೇಮಕಾತಿ ನಿಯಮಾವಳಿಗಳು 1992 ಮತ್ತು ಮಂಡಳಿ ಜ್ಞಾಪನ ಪತ್ರದ ಸಂಖ್ಯೆ:ಮಾನಿಮ 05 ಆಡಎ 10/1305 ರ ದಿನಾಂಕ:31-07-2010 ರಂತೆ ಪ್ರತಿ ಪ್ರಾದೇಶಿಕ ಕಚೇರಿಗಳ ಸಿಬ್ಬಂದಿ ರಚನೆ (Staff Strucrure) ಯಲ್ಲಿ ನಿಗದಿಪಡಿಸಿರುವಂತೆ) ಅನುಸೂಚಿ-||ರಲ್ಲಿ ಗುರುತಿಸಲಾಗಿದೆ.

ದಿನಾಂಕ:10-04-2015 ರಂದು ಪ್ರಕಟಿಸಲಾದ ಅಧಿಸೂಚನೆಯ ಬಗ್ಗೆ ನಿಗದಿತ ಅವಧಿಯಲ್ಲಿ ಸಲ್ಲಿಸಲಾಗಿರುವ ಆಕ್ಷೇಪಣೆಗಳನ್ನು ಪರಿಶೀಲಿಸಿ ಪರಿಗಣಿಸಲಾಗಿರುವಂತೆ ಕರ್ನಾಟಕ ಸಾರ್ವಜನಿಕ ಉದ್ಯೋಗ (ಹೈದರಾಬಾದ್-ಕರ್ನಾಟಕ ಪ್ರದೇಶದವರಿಗಾಗಿ ನೇಮಕಾತಿಯಲ್ಲಿ ಮೀಸಲಾತಿ) (ಸ್ಥಳೀಯ ವೃಂದಗಳ ರಚನೆ, ಹಂಚಿಕೆ ಮತ್ತು ವ್ಯಕ್ತಿಗಳ ವರ್ಗಾವಣೆ) ಆದೇಶ 2013 ರ ಬಗ್ಗೆ ಅಂತಿಮ ಅಧಿಸೂಚನೆಯನ್ನು ಪ್ರಕಟಿಸಲಾಗಿದೆ.

ಅಧ್ಯಕ್ಷರು

ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ

ಪ್ರತಿಗಳು:

1. ಸರ್ಕಾರದ ಕಾರ್ಯದರ್ಶಿಗಳು, ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ ಇವರ ಮಾಹಿತಿಗಾಗಿ
2. ಸರ್ಕಾರದ ಅಪರ ಕಾರ್ಯದರ್ಶಿ, ಸಿಆಸುಇ (ಆಡಳಿತ)/(ಹೈದರಾಬಾದ್-ಕರ್ನಾಟಕ ವಿಶೇಷ ಕೋಶ)/ಸೇವಾ ನಿಯಮಗಳು, ವಿಧಾನಸೌಧ, ಬೆಂಗಳೂರು-01